# ಎಸ್.ಟಿ. ಸೋಮಶೇಖರ್ ಭೇಟಿ : ನಿರಾಶ್ರಿತರಿಗೆ ದವಸ ಧನ್ಯ ವಿತರಣೆ

**ಚಿತ್ರದುರ್ಗ - ಏ. 18 ಹಸಿದವನಿಗೆ ಅನ್ನ ನೀಡುವ ದಾಸೋಹ ಸಂಸ್ಕøತಿಯನ್ನು ಶ್ರೀಮುರುಘರಾಜೇಂದ್ರ ಮಠ ಮೊದಲಿನಿಂದಲೂ ನಡೆಸಿಕೊಂಡು ಬಂದಿದೆ. ಇಲ್ಲಿ ನಿತ್ಯವೂ ಸಾವಿರಾರು ಜನರಿಗೆ ದಾಸೋಹಸೇವೆ ನಡೆಯುತ್ತದೆ ಎಂದು ಸಹಕಾರ ಸಚಿವರಾದ ಎಸ್.ಟಿ.ಸೋಮಶೇಖರ್ ಹೇಳಿದರು.**

ಶ್ರೀಮಠಕ್ಕೆ ಆಗಮಿಸಿದ್ದ ಸಚಿವರನ್ನು ಬರಮಾಡಿಕೊಂಡು ಕೊರೊನಾ ವೈರಸ್ ಹಿನ್ನಲೆಯಲ್ಲಿ ರಾಜ್ಯ ಮತ್ತು ರಾಷ್ಟ್ರ ಸಂಕಷ್ಟಕ್ಕೊಳಗಾಗಿ ಜನರು ಹಸಿವಿನಿಂದ ಪರಿತಪಿಸುತ್ತಿರುವುದರ ಬಗ್ಗೆ ಡಾ. ಶಿವಮೂರ್ತಿ ಮುರುಘಾ ಶರಣರು ಚರ್ಚಿಸಿದರು.

ನಂತರ ಶ್ರೀಗಳಿಂದ ಆಶೀರ್ವಾದ ತೆಗೆದುಕೊಂಡು ಕೊರೊನಾ ಹಿನ್ನಲೆಯಲ್ಲಿ ಮನೆ-ಮನೆಗೆ ಹಾಲು ವಿತರಿಸುವ ವಿತರಕರಿಗೆ ಹಾಗು ಉಪ್ಪಾರ ಸಮುದಾಯದವರಿಗೆ ಶ್ರೀಮಠದಲ್ಲಿ ದವಸ-ಧಾನ್ಯ ವಿತರಿಸಿ ಮಾತನಾಡಿದ ಅವರು, ಶಿವಮೂರ್ತಿ ಮುರುಘಾ ಶರಣರು ಅನೇಕ ರೀತಿಯ ಸರಳತೆಯನ್ನು ಮೆರೆದಿದ್ದಾರೆ. ಭಾರತ ಲಾಕ್‍ಡೌನ್ ಆದಾಗಿನಿಂದ ಚಿತ್ರದುರ್ಗ ನಗರಪ್ರದೇಶ, ಗ್ರಾಮೀಣ ಪ್ರದೇಶಗಳಲ್ಲಿರುವ ಅನೇಕ ಬಡಕಾರ್ಮಿಕರನ್ನು ಗುರುತಿಸಿ ಪ್ರತಿನಿತ್ಯ ದವಸ-ಧಾನ್ಯಗಳನ್ನು ವಿತರಿಸುತ್ತಿರುವುದು ಉತ್ತಮ ಸಂಸ್ಕøತಿ. ಕೇಂದ್ರ ಸರ್ಕಾರ, ರಾಜ್ಯಸರ್ಕಾರ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ಮಠಮ್ಯಾಗಳು, ಸಂಘ-ಸಂಸ್ಥೆಗಳು ಇಂತಹ ಪುಣ್ಯದ ಕೆಲಸ ಮಾಡಬೇಕಿದೆ ಎಂದರು.

ಚಳ್ಳಕೆರೆ ಶಾಸಕರಾದ ಟಿ.ರಘುಮೂರ್ತಿ ಮಾತನಾಡಿ, ಇಂದು ಸಂಕಷ್ಟದ ಪರಿಸ್ಥಿತಿ ಬಂದೊದಗಿದೆ. ತೊಂದರೆಗೊಳಗಾದವರಿಗೆ ಶ್ರೀಗಳು ಹೀಗೆ ಸ್ಪಂದಿಸಿ ಅವರೊಬ್ಬ ವಿಶೇಷ ಸ್ವಾಮೀಜಿಗಳಾಗಿದ್ದಾರೆ. ಯಾರೂ ಸಹ ಅಧೈರ್ಯದಿಂದ ಇರಬಾರದು. ಎಲ್ಲರು ಮಾನಸಿಕವಾಗಿ ಧೈರ್ಯವನ್ನು ತಂದುಕೊಳ್ಳಬೇಕು ಎಂದು ಹೇಳಿದರು.

ಶಾಸಕರಾದ ಜಿ.ಹೆಚ್. ತಿಪ್ಪಾರೆಡ್ಡಿ, ಎ.ಪಿ.ಎಂ.ಸಿ. ಅಧ್ಯಕ್ಷರಾದ ಶಶಿಧರ, ಬಿ.ಜೆ.ಪಿ. ತಾಲ್ಲೂಕು ಅಧ್ಯಕ್ಷರಾದ ಲಿಂಗರಾಜು, ಬಿ.ಜೆ.ಪಿ. ಜಿಲ್ಲಾಧ್ಯಕ್ಷರಾದ ಮುರಳಿ, ಮಾರುಕಟ್ಟೆ ಒಕ್ಕೂಟದ ಅಧ್ಯಕ್ಷರಾದ ಗಿರೀಶ್, ಮಲ್ಲಿಕಾರ್ಜುನಯ್ಯ, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಈಶ್ವರಪ್ಪ ಎ., ಉಪ್ಪಾರ ಸಮಾಜ ಮುಖಂಡರಾದ ತಿಪ್ಪೇಸ್ವಾಮಿ ಮೊದಲಾದವರಿದ್ದರು.







